ಹಾಕಿದ ಹಾಗಾಗುತ್ತೆ. ಯಾರದ್ದೋ ತಳಿ. ನಾನಪ್ಕೊಳ್ಳಾ? ಆಗಲ್ಲಮ್ಮ. ಮಗನ ಮಗ ಬೇಕು."

ಮಾತು ಮುಗಿದಿತ್ತು.

ಪ್ರಿಯಕರನಿಗೆ ಪುರುಸೊತ್ತಾಗಿರಲಿಲ್ಲ. ಬೆಳಿಗ್ಗೆ ಬೇಗ ಎದ್ದು ಓಡೋನು. ರಾತ್ರೆ ಸರಿ ಹೊತ್ತಲ್ಲಿ ಬರೋನು. ಹಗಲು ಏಕಾಂತದಲ್ಲಿ ಸಿಕ್ತಿರಲಿಲ್ಲ. ಅತ್ತೆ, ಮಾವ ಇರೋರು. ರಾತ್ರೆ ಕುಡದ ಮತ್ತಲ್ಲಿ ಇರೋನು. ಮನಸ್ಸಿಗೆ ಮಾತು ನಾಟ್ತಿರ್ಲಿಲ್ಲ.

ಒಂದು ದಿನ ಬೆಳಗ್ಗೆ ಹನ್ನೊಂದಕ್ಕೆ ಆಟೊ ಹತ್ತಿದ್ಲು. ಸೀದಾ ಆಫೀಸಿಗೆ ಹೋದ್ಲು. ಛೇಂಬರಲ್ಲಿದ್ದ. ಹೊರಗಿದ್ದ ನೌಕರ ಗುರ್ತು ಹಿಡ್ದು ಸೆಲ್ಯೂಟ್ ಹೊಡ್ದು, ಬಾಗಿಲು ತೆಗೆದ. ಕೋಣೆಯಲ್ಲಿ ನಾಕಾರು ಜನ ಇದ್ರು. ಕೊಲೀಗ್ಸ್ ಇರ್ಬಹುದು, ಸ್ಟಾಫ್ ಇರ್ಬಹುದು. ಇವ್ಳಿಗೆ ಗೊತ್ತಾಗ್ಲಿಲ್ಲ. ಮಾತು ಅಲ್ಲೆ ಅದ್ಭುತವಾಗಿ ನಡೀತಿತ್ತು. ಸುಖ ಸಂಭ್ರಮ, ನಗು, ಕೇಕೆ, ಓತಪ್ರೋತವಾಗಿ ಪ್ರವಾಹವಾಗಿ ಹರಿದಿತ್ತು. ಎಲ್ಲಾ ಪ್ರಪಂಚ ಸ್ವಾಭಾವಿಕವಾಗಿತ್ತು. ಮನೇಲಿ ದಿನಾ ಕಾಣ್ನೋ ಮುಖ ಇದೇನಾ ಅನ್ನೋ ಅನುಮಾನ ಬರುವಷ್ಟು ಬದಲಾಗಿತ್ತು.

ಇವಳನ್ನು ನೋಡ್ದ. ಉತ್ಸಾಹ ಜರ್‍ರನೆ ಇಳಿಯಿತು. ಎಲ್ರನ್ನೂ ಆಚೆ ಕಳಿಸ್ದ.

"ಏನು?"

"ಮಾತಾಡ್ಬೇಕು."

"ಮನೇಲಿ ಸಿಕ್ತೀನಿ."

"ಅಲ್ಲಿ ನೀನು... ಸಿಗಲ್ಲ."

"ಏನು ಹೇಳು. ಪುರುಸೊತ್ತಿಲ್ಲ."

"ನನ್ನದೇನು ತಪ್ಪು? ನನಗೆ ಯಾಕೆ ನರಕ ಮಾಡ್ತಿದ್ದೀರಿ. ಮಾತಿಲ್ಲ, ಕತೆಯಿಲ್ಲ. ಮತ್ತೆ ಪ್ರಯತ್ನಿಸೋಣ. ಮಕ್ಕಳಾಗುತ್ತೆ. ದತ್ತು ತಗೊಳ್ಳೋದಾದ್ರೂ ಆಗ್ಲಿ. ಅದೂ ಸರಿಯೇ. ಎಲ್ಲಾ ಸ್ವಾಭಾವಿಕವಾಗಿ ಮೊದಲಿನ ಹಾಗೇ ಆಗಬೇಕು. ಏನು ಮಾಡಬೇಕು ಹೇಳಿ, ನಾನು ಸಿದ್ಧ. ಯಾವುದೇ ನರಕವಾದ್ರೂ ಸರಿ. ಹೇಳಿ ಅನುಭವಿಸ್ತೀನಿ. ನನಗೆ ನೀವು ಬೇಕು. ಹಳೆಯ ನೀವು ಬೇಕು."

"ಐ ಯಾಮ್ ಸ್ಸಾರಿ. ಐ ಕಾಂಟ್ ಅಂಡರ್ ಗೋ ದಿಸ್ ಎಗೇನ್! ದತ್ತು ಅಪ್ಪಂಗೆ ಇಷ್ಟ ಇಲ್ಲ."

"ಮತ್ತೆ?..."

"ಐ ಡೋಂಟ್ ನೋ. ನನಗ್ಗೊತ್ತಿಲ್ಲ."

ನೇರ ಕೇಳಿದಳು, "ಏನನ್ನ ಪ್ರೀತಿಸಿದ್ ನೀವು? ನನ್ನ ವಿದ್ಯೇನಾ? ನನ್ನ ಬುದ್ಧೀನಾ? ನನ್ನ ರೂಪಾನಾ? ಅಥವಾ ನನ್ನ ವ್ಯಕ್ತಿತ್ವನಾ? ಏನನ್ನ ಪ್ರೀತ್ಸಿದ್ರಿ. ಬಿಡಿಬಿಡಿಯಾಗಿ ನೀವು ನನ್ನನ್ನ ಪ್ರೀತ್ಸಿರ್ಬಹುದು. ಆದ್ರೆ ಇಡೀಯಾಗಿ ನಾನಿರೋದು. ಈ ಸುಂದರ ರೂಪ, ಮೈಮರೆಸೋ ವ್ಯಕ್ತಿತ್ವದೊಟ್ಟಿಗೆ ಮಗು ಆಗದ್ದೂ ಒಂದಿದೆ. ಮೈಮರೆಸೋಕೆ ರೂಪ ವ್ಯಕ್ತಿತ್ವಗಳ ಸಂಪರ್ಕ ಆಗಿರ್ಬಹುದು. ರೂಪ ಹಾಳಾಗಿದೆ ಈವಾಗ. ರೂಪದ ಸವಿ ಮುಗೀತು. ಮಗೂ ಆಗದ ಊನ ಉಳಿದಿದೆ. ಈ ಮಂದಾಕಿನಿ ಬೇಡ ಅಲ್ವ?"

"ಐಯಾಮ್ ಸ್ಸಾರಿ. ನಾನು ಅಂದರೆ ಬರೀ ನಾನಲ್ಲ. ನನ್ನ ಅಪ್ಪ ಅಮ್ಮ ಎಲ್ಲ. ನನಗೆ ಮಕ್ಕಳಿಷ್ಟ. ಬೇಕು. ಅದು ಸ್ವಂತದ್ದೇ ಬೇಕು."

"ಆಗದಿದ್ರೆ?..."

"ಐ ಡೋಂಟ್ ನೋ."